ಇವುಗಳಲ್ಲದೆ. ರಸ್ತೆ ಕಾಮಗಾರಿ. ಮಾಡಲು. ರಸ್ತೆ ಉಬ್ಬುಗಳನ್ನು ಹಾಕುವ ಬಗ್ಗೆ. ಹಾಗೂ ಎಚ್ಚರಿಕಾ ಫಲಕಗಳನ್ನು ಹಾಕಲು ಮಂಗಳೂರು ನಗರ ಪುರಸಭೇಯನ್ನು ಕೇಳಿಕೊಳ್ಳಲಾಗಿದೆ. ಸ್ಪೀಡ್ ಗವರ್ನರ್‌ಗಳನ್ನು ವಾಹನಗಳಿಗೆ ಅಳವಡಿಸುವ ವಿಚಾರ ಪರಿಶೀಲನೆಯಲ್ಲಿದೆ.

**4. ಪುತ್ತೂರು ತಾಲ್ಲೂಕು "ಕಡಬ" ವಿದ್ಯುತ್ ಸಬ್‌ಸ್ಟೇಷನ್ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.**

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಅಧ್ಯಕ್ಷರೇ. ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿ "ಕಡಬ" ವಿದ್ಯುತ್ ಸಬ್ ಸ್ಟೇಷನ್ ಮಂಜೂರಾಗಿ ಎಷ್ಟು ವರ್ಷ ಸಂದಿದೆ? ಸದ್ರಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ? ಸದ್ರಿ ಕಾಮಗಾರಿಯನ್ನು ಮಂಜೂರು ಮಾಡಿ ಇಷ್ಟು ವರ್ಷಗಳಾದರೂ ಕೆಲಸ ಕೈಕೊಳ್ಳದಿರಲು ಕಾರಣವೇನು? ಈ ಕಡಬ ಸಬ್ ಸ್ಟೇಷನ್‌ನಿಂದ ಶ್ರೀ ಕುಕ್ಕೆಸುಬ್ರಹ್ಮಣ್ಯ ಪುಣ್ಯಕ್ಷೇತ್ರಕ್ಕೂ. ವಿದ್ಯುತ್ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಆದುದರಿಂದ ಈ ಕಾಮಗಾರಿಯನ್ನು ಯಾವಾಗ ಕೈಗೊಂಡು ಪ್ರಾರಂಭಿಸಲಾಗುವುದು. ಮತ್ತು ಕಾಮಗಾರಿಯನ್ನು ಪೂರೈಸಲು ಸರಕಾರ ಈಗಲಾದರೂ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ. ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಸೂಳ್ಯದಿಂದ 11 ಕೆ.ವಿ. ಲೈನಿನ ಮೂಲಕ ಸರಬರಾಜು ಮಾಡಲಾಗುತ್ತಿದೆ. ಕಡಬದಲ್ಲಿ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಲು ಯೋಜಿಸಿದ್ದು. ಇದರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕೆಲಸವು ಐದಾರು ತಿಂಗಳುಗಳಲ್ಲಿ ಮುಗಿಯುವ ನಿರೀಕ್ಷೆಯಿದೆ. ಈ ವಿದ್ಯುತ್ ಉಪ ಕೇಂದ್ರವು ಮುಗಿದ ನಂತರ. ಕಡಬ ವಿದ್ಯುತ್ ಉಪ ಕೇಂದ್ರದಿಂದ ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದು. ಈ ಸಬ್ ಸ್ಟೇಷನ್ ಮಂಜೂರಾಗಿ ಸುಮಾರು ಎರಡೂವರೆ ವರ್ಷಗಳಾಗಿರುತ್ತದೆ. ಈ ಸಬ್‌ಸ್ಟೇಷನ್ ಅನ್ನು ಒಂದೂವರೆ ವರ್ಷದಲ್ಲಿ ಮಾಡಿಸಿಕೊಡುತ್ತೇನೆ.

**5. ಮೂಡಬಿದ್ರೆಯಲ್ಲಿ ಏತನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ತಿಗೊಳಿಸುವ ಬಗ್ಗೆ.**

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ನನ್ನ ಮೂಡುಬಿದ್ರೆ ಕ್ಷೇತ್ರದ ಏತ ನೀರಾವರಿ ಯೋಜನೆಯಂತ ಬಳಕುಂಜೆ. ಏಳಿಂಜೆ ಮತ್ತು ಮೂಡಬಿದ್ರಿಯ ಮಾರೂರು ಗ್ರಾಮಗಳಲ್ಲಿ ಮಂಜೂರಾತಿ ಒದಗಿದ್ದರು ಮೂಡಬಿದ್ರಿಯ ಫಿರ್ಕಾದ ಮಾರೂರು ಗ್ರಾಮದ ಸರ್ವೆ ಕಾರ್ಯವನ್ನು ಪೂರ್ತಿಗೊಳಿಸದೆ ಇಲ್ಲಿಗೆ ಈತನಕ ಸಂಬಂಧಿತ ಅಧಿಕಾರಿಗಳು ಬಾರದೆ ಕೆಲಸ ಬಹಳ ನಿಧಾನವಾಗಿರುತ್ತದೆ. ಹೀಗಾಗಿ ಈ ಕೆಲಸಗಳನ್ನು ಕೂಡಲೇ ತ್ವರಿತಗತಿಯಲ್ಲಿ ಮಾಡುವಂತೆ ನಾನು ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಮಾತ್ರವಲ್ಲದೇ ಈ ಕಾಮಗಾರಿಗಳ ಪ್ರಗತಿಯ ವಿವರ ತಿಳಿಯಲು ಬಯಸುತ್ತೇನೆ. ಈ ಕೆಲಸಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ. ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಏತ ನೀರಾವರಿ ನಿಗಮಗಳಿಂದ ಕೈಗೊಳ್ಳುವ ಏತ ನೀರಾವರಿ ಯೋಜನೆಗಳಿಗೆ ಯೋಜನಾ ವೆಚ್ಚದ ಶೇಕಡಾ 75ರಷ್ಟು ಹಣವನ್ನು ಆರ್ಥಿಕ ಸಂಸ್ಥೆಗಳಿಂದ ಸಾಲವಾಗಿ ಪಡೆಯಬೇಕಾಗಿದೆ. ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ಮಾಡಬಿದ್ರಿ ಕ್ಷೇತ್ರದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಏತ